ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು (ಅನುಬಂಧ–1)

ಕೆರೆಗಳಿಗೆ ನೀರಿನ ಹಂಚಿಕೆ

909(1249); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 16 ಕೆರೆಗಳಿಗೆ ನೀರಿನ ಹಂಚಿಕೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಹಾಗಿದ್ದಲ್ಲಿ ಯಾವ ಯಾವ ಪ್ರಮಾಣದಲ್ಲಿ ನೀರಿನ ಹಂಚಿಕೆ ಮಾಡಲಾಗುವುದು;

ಇ) ಯಾವ ಕಾಲಮಿತಿಯೊಳಗೆ ಮಾಡಲಾಗುವುದು?

ಶ್ರೀ M.B. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ), ಆ) ಮತ್ತು ಇ) ರಾಯಬಾಗ ತಾಲ್ಲೂಕಿನ 11 ಗ್ರಾಮಗಳ 16 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವ ಬಗ್ಗೆ ಮನವಿ ಬಂದಿದ್ದು, ಮನವಿ ಮನವಿಯು ನಿಗಮದಲ್ಲಿ ಪರಿಶೀಲನೆಯಲ್ಲಿದೆ.

ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ

910(1250); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 16 ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಈ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ M.B. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ), ಆ) ಮತ್ತು ಇ) ರಾಯಬಾಗ ತಾಲ್ಲೂಕಿನ 11 ಗ್ರಾಮಗಳ 16 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರನ್ನು ತುಂಬಿಸುವ ಬಗ್ಗೆ ಮನವಿ ಬಂದಿದ್ದು, ಮನವಿಯು ನಿಗಮದಲ್ಲಿ ಪರಿಶೀಲನೆಯಲ್ಲಿದೆ.

ಸಿಬ್ಬಂದಿಗಳಿಗೆ ತರಬೇತಿ ನೀಡಿ ಆಯುಧ ಒದಗಿಸುವುದು

911(1251); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಆಯುಧವನ್ನು ಉಪಯೋಗಿಸುವ ತರಬೇತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ತರಬೇತಿ ನೀಡಲಾಗುವುದು.

ಇ) ಸುಧಾರಿತ ಹಾಗೂ ಹೊಸ ಮಾದರಿಯ ಆಯುಧಗಳನ್ನು ಸಿಬ್ಬಂದಿಗಳಿಗೆ ಒದಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಮತ್ತು ಆ) ಹೊಸದಾಗಿ ನೇಮಕಾತಿ ಹೊಂದಿದ /ಅನುಕಂಪದ ಆಧಾರದ ಮೇಲೆ ಸೇವೆಗೆ ಸೇರಿದ ಉಪ ವಲಯ ಅರಣ್ಯಾಧಿಕಾರಿ ಹಾಗೂ ಅರಣ್ಯ ರಕ್ಷಕರಿಗೆ ಬುನಾದಿ ತರಬೇತಿಯನ್ನು ನೀಡುವಂತಹ ಅವಧಿಯಲ್ಲಿ ಆಯುಧ ತರಬೇತಿಯನ್ನು ನೀಡಲಾಗುತ್ತಿದೆ.

ಇ) ಯಾವುದೇ ತೊಂದರೆ ಇರುವುದಿಲ್ಲ.